# ಸೇವಾಯಾನ ಟ್ರಸ್ಟ್ (ರಿ.)

#1167, ಬಿಎಸ್‌ಎನ್‌ಎಲ್ ಟವರ್ ಹಿಂಭಾಗ, ಮೊದಲನೆಯ ಘಟ್ಟ,
ವಿಜಯನಗರ 4ನೇ ಹಂತ, ಮೈಸೂರು

ನೋಂದಣಿ ಸಂಖ್ಯೆ:MYW-4-00269-2019-2020




ಇ-ಮೇಲ್ : sevayanatrust@gmail.com
ಫೇಸ್ ಬುಕ್: Sevayana Trust Mysore
ವೆಬ್ ಸೈಟ್ : www.sevayanatrust.com
ಮೊ : 9535426335, 9513984848

**ಸೇವಾಯಾನ ಸಂಸ್ಥೆಯ ಕುರಿತು :**

ಕೆಲವೊಂದು ಸ್ವಯಂಸೇವಾ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ, ವಿವಿಧ ಸೇವಾ ಕ್ಷೇತ್ರಗಳಲ್ಲಿ ಪರಿಣಿತಿ ಪಡೆದ ಯುವ ಪಡೆಯೊಂದು, ಸಮಾಜದಲ್ಲಿ ಹಿರಿಯ ನಾಗರೀಕರ ಕಲ್ಯಾಣ ಕಾರ್ಯಕ್ರಮಗಳು, ಮಹಿಳಾ ಸಬಲೀಕರಣ, ಸಮುದಾಯ ಅಭಿವೃದ್ಧಿ ಮೊದಲಾದ ಉದ್ದೇಶಗಳೊಂದಿಗೆ ಸ್ಥಾಪಿಸಿದ ಸಂಸ್ಥೆಯೇ ಸೇವಾಯಾನ ಟ್ರಸ್ಟ್. ಸಂಸ್ಥೆಯು 2019ರಲ್ಲಿ ತನ್ನ ಸಮಾಜಮುಖಿ ಚಟುವಟಿಕೆಗಳನ್ನು ಪ್ರಾರಂಭಿಸಿದ್ದಾಗ್ಯೂ, 08ನೇ ಜನವರಿ 2020ರಂದು ಅಧಿಕೃತವಾಗಿ ನೋಂದಣಿಗೊಂಡು, ಬಾಡಿಗೆ ಕಟ್ಟಡವೊಂದರಲ್ಲಿ ತನ್ನ ಕಾರ್ಯ ಚಟುವಟಿಕೆಗಳನ್ನು ಪ್ರಾರಂಭಿಸಿತು.

**ವಿಷನ್**

ಸ್ವಸ್ಥ, ಸುಸ್ಥಿರ ಮತ್ತು ಅಭಿವೃದ್ಧಿಪರ ಸಮಾಜದ ರಚನೆ

**ಮಿಷನ್:**

ಅಗತ್ಯ ಸೇವೆಗಳನ್ನು ಒದಗಿಸುವ ಮೂಲಕ ಸಾಮಾಜಿಕ ಅಭಿವೃದ್ಧಿಯನ್ನು ಸುಗಮಗೊಳಿಸುವುದು

**ಉದ್ದೇಶಗಳು:**

ಹಿರಿಯ ನಾಗರೀಕರ ಕಲ್ಯಾಣ, ಮಹಿಳಾ ಸಶಕ್ತತೆ, ಸಾಮಾಜಿಕ ಸಮಾನತೆ, ಮಕ್ಕಳ ಹಕ್ಕುಗಳ ರಕ್ಷಣೆ, ಉತ್ತಮ ಸಮಾಜಕ್ಕಾಗಿ ಉತ್ತಮ ಆರೋಗ್ಯ, ಸ್ವಚ್ಛ ಪರಿಸರ ಅಭಿಯಾನ, ಜಲಸಂರಕ್ಷಣೆ, ಮೊದಲಾದವುಗಳು

**ಅನುಷ್ಠಾನದಲ್ಲಿರುವ ಕಾರ್ಯಕ್ರಮಗಳು**

1. ಹಿರಿಯ ನಾಗರೀಕರ ಆರೈಕೆ ಕೇಂದ್ರ

ಸಂಸ್ಥೆಯು ತನ್ನ ಮೊದಲನೆಯ ಕಾರ್ಯಕ್ರಮವಾಗಿ 60 ವರ್ಷ ಮೇಲ್ಪಟ್ಟ ಮಹಿಳಾ ಹಿರಿಯ ನಾಗರೀಕರಿಗಾಗಿ ಉಚಿತವಾಗಿ ಆರೈಕೆ ಕೇಂದ್ರವನ್ನು ಆರಂಭಿಸಿತು. ಇಲ್ಲಿ ಉತ್ತಮ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ತನ್ನ ಆಶ್ರಿತರಿಗೆ ಗುಣಮಟ್ಟದ, ಸ್ವಚ್ಛಂದವಾದ ಹಾಗೂ ಕೌಟುಂಬಿಕ ವಾತಾವರಣವನ್ನು ಕಲ್ಪಿಸಿಕೊಟ್ಟಿದೆ.











1. **ವೃತ್ತಿ ತರಬೇತಿ ಕಾರ್ಯಕ್ರಮಗಳು**

- **ಟೈಲರಿಂಗ್ ತರಬೇತಿ**




ಆರ್ಥಿಕವಾಗಿ ಹಿಂದುಳಿದಿರುವ ಸಮುದಾಯಗಳ ಆಸಕ್ತ ಮಹಿಳೆಯರಿಗೆ ಕೌಶಲಾಭಿವೃದ್ಧಿ ಹಾಗೂ ವೃತ್ತಿಪರ ತರಬೇತಿಗಳನ್ನು ಆಯೋಜಿಸಿ, ಆ ಮೂಲಕ ಅವರನ್ನು ಆರ್ಥಿಕವಾಗಿ ಸಬಲರಾಗುವಂತೆ ಮಾಡಲು ಪ್ರಯತ್ನಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದ್ದು, ಈಗಾಗಲೇ ಟೈಲರಿಂಗ್ ವೃತ್ತಿತರಬೇತಿಯನ್ನು ನಡೆಸಲಾಗುತ್ತಿದೆ. ಇಲ್ಲಿಯವರೆಗೆ 60 ಮಂದಿ ಮಹಿಳೆಯರು ಟೈಲರಿಂಗ್ ತರಬೇತಿಯನ್ನು ಪಡೆದಿರುತ್ತಾರೆ.

- **ಪೇಪರ್ ಬ್ಯಾಗ್ ತರಬೇತಿ**




ಸೇವಾಯಾನ ಸಂಸ್ಥೆಯ ಅತ್ಯಂತ ಮಹತ್ವಕಾಂಕ್ಷಿ ಯೋಜನೆ ಇದಾಗಿದ್ದು, ದಾನಿಗಳಿಂದ ಸಂಗ್ರಹಿಸಲ್ಪಟ್ಟ ದಿನಪತ್ರಿಕೆಗಳಿಂದ ಸಂಸ್ಥೆಯ ಆಶ್ರಿತರು ದಿನದಲ್ಲಿ ಎರಡು ಗಂಟೆಗಳ ಕಾಲ ಪೇಪರ್ ಬ್ಯಾಗ್‌ಗಳನ್ನು ತಯಾರಿಸುತ್ತಾರೆ. ಅದಲ್ಲದೇ ಸ್ಥಳೀಯವಾಗಿ ಅಗತ್ಯವುಳ್ಳ ಮಹಿಳೆಯರಿಗೆ ಈ ತರಬೇತಿಯನ್ನು ನೀಡಿ, ಮನೆಯಲ್ಲೇ ಕುಳಿತು ಸ್ವ-ಉದ್ಯೋಗ ಮಾಡುವ ಅವಕಾಶವನ್ನು ಕಲ್ಪಿಸಿಕೊಡಲಾಗಿದೆ ಹಾಗೂ ಅವರು ತಯಾರಿಸಿದ ಬ್ಯಾಗ್‌ಗಳಿಗೆ ಮಾರುಕಟ್ಟೆಯನ್ನು ಸಹ ಒದಗಿಸಿಕೊಡಲಾಗುತ್ತಿದೆ. ಇದು ಮಹಿಳೆಯರನ್ನು ಸ್ವಾವಲಂಬಿ ಗಳನ್ನಾಗಿಸುತ್ತಿದ್ದು, ಅವರಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸುವ ಸಫಲ ಪ್ರಯತ್ನವಾಗಿದೆ

- **ಬಟ್ಟೆ ಬ್ಯಾಗ್ ತರಬೇತಿ**




ಸೇವಾಯಾನ ಸಂಸ್ಥೆಯ ಟೈಲರಿಂಗ್ ಘಟಕದಲ್ಲಿ ತರಬೇತಿ ಪಡೆಯುವ ಮಹಿಳೆಯರಿಗೆ ಹೊಲಿಗೆ ತರಬೇತಿಯ ಜೊತೆಗೆ ಬಟ್ಟೆ ಬ್ಯಾಗ್ ತಯಾರಿಕೆ ಮಾಡುವುದನ್ನೂ ಸಹ ಕಲಿಸಿಕೊಡಲಾಗುತ್ತದೆ. ಪರಿಸರ ಸ್ನೇಹಿ ಬಟ್ಟೆ ಬ್ಯಾಗ್‌ಗಳು ಇಂದಿನ ಅಗತ್ಯತೆಗಳಲ್ಲಿ ಒಂದಾಗಿದ್ದು, ಮಹಿಳೆಯರು ತಯಾರಿಸಿದ ಬಟ್ಟೆ ಬ್ಯಾಗ್ ಗಳಿಗೆ ಸೇವಾಯಾನ ಸಂಸ್ಥೆಯು ಮಾರುಕಟ್ಟೆ ವ್ಯವಸ್ಥೆಯನ್ನು ಒದಗಿಸಿಕೊಡುವ ಮೂಲಕ ಮಹಿಳೆಯರನ್ನು ಆರ್ಥಿಕವಾಗಿ ಸದೃಡಗೊಳಿಸುತ್ತಿದೆ.

Scanned with Oken Scanner

**ತಮ್ಮ ಪಾಲ್ಗೊಳ್ಳುವಿಕೆ:**

- ಸೇವಾಯಾನ ಸಂಸ್ಥೆಯ ಹಿರಿಯ ನಾಗರೀಕರ ಆರೈಕೆ ಕೇಂದ್ರ ಹಾಗೂ ತರಬೇತಿ ಘಟಕಗಳ ಮಾಸಿಕ ಅಂದಾಜು ವೆಚ್ಚ 100000/-(ಒಂದು ಲಕ್ಷ)ರೂಪಾಯಿಗಳಷ್ಟಿದ್ದು, ದಾನಿಗಳು ಸಂಸ್ಥೆಗೆ ಹಣಕಾಸಿನ ನೆರವನ್ನು ನೀಡಬಹುದು. ಅಥವಾ ಖರ್ಚಿನ ಯಾವುದಾದರೂ ಒಂದು ಭಾಗವನ್ನು ಭರಿಸಬಹುದು. ಮಾಸಿಕ ವೆಚ್ಚಗಳ ವಿವರವನ್ನು ಈ ಕೆಳಕಂಡಂತೆ ನಮೂದಿಸಲಾಗಿದೆ:

**1. ವೃದ್ಧಾಶ್ರಮ:**

ಬಾಡಿಗೆ-20000/-, ಹಾಲು-ಮೊಸರು-2500/-, ವಿದ್ಯುತ್ ಹಾಗೂ ನೀರಿನ ವೆಚ್ಚ -2000/- ದಿನಸಿ ಸಾಮಾನುಗಳು-15000/-, ವೈದ್ಯಕೀಯ ವೆಚ್ಚ -4000/- ಕಾರ್ಯಕರ್ತರ ಮಾಸಿಕ ವೇತನ-24000/- (ಐದು ಜನರಿಗೆ), ತರಕಾರಿ ಹಾಗೂ ಸಿಲಿಂಡರ್- 4000/-, ಇತರೆ (ವಿಹಾರಗಳು, ಕಾರ್ಯಕ್ರಮಗಳು, ಕಛೇರಿ ಖರ್ಚು, ಇತರೆ) - 8500/-)

**2. ತರಬೇತಿ ಕೇಂದ್ರ :**

ಬಾಡಿಗೆ -5200/-, ತರಬೇತುದಾರರ ಗೌರವ ಧನ (ಇಬ್ಬರಿಗೆ) -10000/-, ನಿರ್ವಹಣಾ ವೆಚ್ಚ (ವಿದ್ಯುತ್ ಹಾಗೂ ನೀರಿನ ವೆಚ್ಚ, ಸ್ವಚ್ಛತೆ, ಮೆಷಿನ್‌ಗಳ ನಿರ್ವಹಣೆ, ಇತ್ಯಾದಿ -4800/-)

- ಸೇವಾಯಾನ ಸಂಸ್ಥೆಯಲ್ಲಿ ಒಬ್ಬರು ಆಶ್ರಿತರಿಗೆ ಮಾಸಿಕ 5000/-ಗಳಷ್ಟು ಖರ್ಚು ಬರುತ್ತದೆ. ಹೀಗಾಗಿ ದಾನಿಗಳು ಆಶ್ರಿತರ ಮಾಸಿಕ ಅಥವಾ ವಾರ್ಷಿಕ ವೆಚ್ಚವನ್ನೂ ಸಹ ಭರಿಸಬಹುದು
- ಸಂಸ್ಥೆಯ ಪೇಪರ್ ಬ್ಯಾಗ್ ಘಟಕಕ್ಕೆ ಹಳೆಯ ದಿನಪತ್ರಿಕೆಗಳನ್ನು ದೇಣಿಗೆಯಾಗಿ ನೀಡಬಹುದು ಹಾಗೂ ನಮ್ಮಲ್ಲಿ ತಯಾರಾದ ಪೇಪರ್ ಬ್ಯಾಗ್ ಹಾಗೂ ಬಟ್ಟೆ ಬ್ಯಾಗ್‌ಗಳನ್ನು ಕೊಳ್ಳಬಹುದು.
- ತಮ್ಮ ವ್ಯವಹಾರಿಕ ಸ್ಥಳಗಳಲ್ಲಿ ಸೇವಾಯಾನ ಸಂಸ್ಥೆಯ ಡೊನೇಷನ್ ಬಾಕ್ಸ್‌ಗಳನ್ನು ಇಡಬಹುದು.

## ಬ್ಯಾಂಕ್ ಖಾತೆಯ ವಿವರ

| | | |
|---|---|---|
| ಹೆಸರು | : | ಸೇವಾಯಾನ ಟ್ರಸ್ಟ್ |
| ಬ್ಯಾಂಕ್‌ನ ಹೆಸರು | : | ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ |
| ಶಾಖೆ | : | ವಿಜಯನಗರ 2ನೇ ಹಂತ |
| ಖಾತೆ ಸಂಖ್ಯೆ | : | 39123150255 |
| ಐಎಫ್ಎಸ್‌ಸಿ | : | SBIN0040[illegible] |

Scanned with Oken Scanner